ಕೆರೆಯಲ್ಲಿ ಮುಳುಗಿ ಬಾಲಕರಿಬ್ಬರು ಸಾವು

ಶಿಡ್ಲಘಟ್ಟ: ಕುರಿ ಮೇಯಿಸಲು ಹೋಗಿದ್ದ ಇಬ್ಬರು ಬಾಲಕರು ಬಚ್ಚನಹಳ್ಳಿ ಕೆರೆಯಲ್ಲಿ ಮುಳುಗಿ ಮಂಗಳವಾರ ಮೃತಪಟ್ಟಿದ್ದಾರೆ.

ತಾಲ್ಲೂಕಿನ ದಿಬ್ಬೂರಹಳ್ಳಿ ಗ್ರಾಮದ ಮೂರ್ತಿ ಹಾಗೂ ನಾಗಮಣಿಯವರ ಮಗ ದರ್ಶನ್ (15) ಹಾಗೂ ಕಾಚಹಳ್ಳಿ ಗ್ರಾಮದ ಮಂಜುನಾಥ ಹಾಗೂ ಗಂಗರತ್ನಮ್ಮ ಅವರ ಮಗ ಶಿವ (14) ಮೃತರು.

ಐದು ಹಳೆ ದಾಖಲೆ ಮುರಿದ ಯೋಧರು • ನಾಲ್ಕು ಹೊಸ ದಾಖಲೆ ನಿರ್ಮಾಣ?

127 ಮೀ. ಉದ್ದದ ಬೆಂಕಿ ಸುರಂಗದಲ್ಲಿ ಬೈಕ್ ಸವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇನೆಯ ಸೇವಾ ಘಟಕದ (ಎಎಸ್‌ಸಿ) ಮೋಟಾರ್ ಬೈಕ್ ಸಾಹಸ ಪ್ರದರ್ಶನ ತಂಡವಾದ 'ಟಾರ್ನಡೋಸ್' 127 ಮೀ. ಉದ್ದದ ಬೆಂಕಿ ಸುರಂಗವನ್ನು ಹಾದು ಹೋಗುವುದು ಸೇರಿದಂತೆ ಒಟ್ಟು ಒಂಬತ್ತು ವಿಶ್ವದಾಖಲೆಗಳನ್ನು ನಿರ್ಮಿಸುವ ಪ್ರಯತ್ನ ನಡೆಸಿದೆ.

ಕ್ಯಾ.ಶಿವಂ ಸಿಂಗ್ ನೇತೃತ್ವದ 34 ಮಂದಿ ಸಾಹಸೀ ಸೈನಿಕರ ತಂಡವು ನಗರದಲ್ಲಿ ಸೋಮವಾರ ಮತ್ತು ಮಂಗಳವಾರ ನಾಲ್ಕು ಹೊಸ ದಾಖಲೆ ನಿರ್ಮಿಸುವ ಹಾಗೂ ಐದು ಹಳೆ ದಾಖಲೆಗಳನ್ನು ಮುರಿಯುವ ಪ್ರಯತ್ನಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತು. ಬೆಂಕಿಯ ಸುರಂಗದಲ್ಲಿ ಬೈಕಿನಲ್ಲಿ ಸಾಗುವ ಸಾಹಸ, ಬೈಕ್‌ನಲ್ಲಿ ಮಾನವ ಪಿರಮಿಡ್‌ಗಳು ಸಾಗುವ ಪರಿ, ಹಿಮ್ಮುಖವಾಗಿ ಬೈಕ್ ಚಲಾಯಿಸುವ ಚಾಲಾಕಿತನಗಳು ಮೈನವಿರೇಳಿಸಿದವು.

2014ರ ಸೆ.5ರಂದು ದಕ್ಷಿಣ ಆಫ್ರಿಕಾದ ಎನ್ರಿಕೊ ಶೋಮನ್ ಮತ್ತು ಆ್ಯಂಡ್ರೆ ಡಿಕಾಕ್ ಅವರು ಬೆಂಕಿಯ ಸುರಂಗದಲ್ಲಿ 120.4 ಮೀ. ದೂರವನ್ನು ಕ್ರಮಿಸಿದ್ದು ಈ ಹಿಂದಿನ ದಾಖಲೆಯಾಗಿತ್ತು. ಟಾರ್ನಡೋಸ್ ತಂಡದ ಕ್ಯಾ.ಶಿವಂ ಸಿಂಗ್ 130 ಮೀ.ಉದ್ದದ ಬೆಂಕಿ ಸುರಂಗವನ್ನು ಗುರಿಯನ್ನು ಹೊಂದಿದ್ದರು. 127 ಮೀ ಉದ್ದದ ಸುರಂಗವನ್ನು ಕ್ರಮಿಸುವ ಮೂಲಕ ಹೊಸ ದಾಖಲೆ ನಿರ್ಮಿಸಿದರು.

ದೊಮ್ಮಲೂರಿನ ಎಎಸ್‌ಸಿ ಸೆಂಟರ್ ಮತ್ತು ಕಾಲೇಜು ಮೈದಾನದಲ್ಲಿ ಮಂಗಳವಾರ ನಡೆದ ಸಾಹಸ ಪ್ರದರ್ಶನಗಳಲ್ಲಿ ಬೆಂಕಿಯ ಸುರಂಗದ ಮೂಲಕ ಹಾಯ್ದು ಬಂದ ಎಸಿಎಸ್ ಟೊರ್ನಾಡೋಸ್ ತಂಡದ ಶಿವಂ ಸಿಂಗ್ ವಿಶ್ವದಾಖಲೆ ಮಾಡಿದರು ಪ್ರಜಾವಾಣಿ ಚಿತ್ರ : ಅನೂಪ್ ರಾಘ .ಟಿ.

ಎರಡು ಬೈಕ್‌ಗಳಲ್ಲಿ 15 ಮಂದಿಯ ಪಿರಮಿಡ್ ಹೊತ್ತು 1 ಕಿ.ಮೀ ದೂರವನ್ನು 48.12 ಸೆಕೆಂಡ್‌ಗಳಲ್ಲಿ ಕ್ರಮಿಸಿದ್ದ ದಾಖಲೆಯನ್ನು ಟಾರ್ನಡೋಸ್ ತಂಡ ಸುಧಾರಿಸಿಕೊಂಡಿದೆ. 2015ರಲ್ಲಿ ಟಾರ್ನಡೋಸ್ ಈ ದಾಖಲೆಯನ್ನು ನಿರ್ಮಿಸಿತ್ತು. ಈ ಬಾರಿ 17 ಮಂದಿ ಎರಡು ಬೈಕ್‌ಗಳಲ್ಲಿ 1 ಕಿ.ಮೀ ದೂರವನ್ನು 46.26 ಸೆಕೆಂಡ್‌ಗಳಲ್ಲಿ ಕ್ರಮಿಸಿದರು. ಕ್ಯಾ.ಶಿವಂ ಸಿಂಗ್ ಹಾಗೂ ನೀಲಾಂಜನ್ ಬೇಜ್ ಬೈಕ್ ಚಲಾಯಿಸಿದ್ದರು.

ಮೂರು ಬೈಕ್‌ಗಳಲ್ಲಿ 32 ಮಂದಿಯ ಪಿರಮಿಡ್ ಹೊತ್ತು 1 ಕಿ.ಮೀ ದೂರವನ್ನು 56.23 ಸೆಕೆಂಡ್‌ಗಳಲ್ಲಿ ಕ್ರಮಿಸಿದ್ದ ಟಾರ್ನಡೋಸ್ ತಂಡದ ಈ ಹಿಂದಿನ ದಾಖಲೆಯೂ ಮುರಿದುಬಿತ್ತು. ಈ ಬಾರಿ 34 ಮಂದಿ ಮೂರು ಬೈಕ್‌ಗಳಲ್ಲಿ 1 ಕಿ.ಮೀ ದೂರವನ್ನು 54.35 ಸೆಕೆಂಡ್‌ಗಳಲ್ಲಿ ತಲುಪಿದರು. ಹೃಷಿಕೇಶ್ ಯಾದವ್, ಅಮ್ಜದ್ ಖಾನ್ ಹಾಗೂ ದೀಪಕ್ ಕುಮಾರ್‌ಯಾದವ್ ಬೈಕ್ ಚಲಾಯಿಸಿದ್ದರು.

ಹಿಮ್ಮುಖವಾಗಿ ಬೈಕಿನಲ್ಲಿ ಅತಿ ದೂರ ಚಲಿಸುವ ಹಳೆ ದಾಖಲೆಯನ್ನೂ ಉತ್ಸಾಹಿ ಸೈನಿಕರು ಅಳಿಸಿಹಾಕಿದರು. ಈ ಹಿಂದೆ 2014ರ ಅ.07ರಂದು ಡೇರ್ ಡೆವಿಲ್ಸ್ ತಂಡವು ಬೈಕಿನಲ್ಲಿ ಹಿಮ್ಮುಖವಾಗಿ ಚಲಿಸಿ 202 ಕಿ.ಮೀ ದೂರವನ್ನು ಕ್ರಮಿಸಿತ್ತು. ಟಾರ್ನಡೋಸ್ ತಂಡದ ಪ್ರದೀಪ್ ಎಸ್.ಎಸ್ 204.4 ಕಿ.ಮೀ ದೂರವನ್ನು ಹಿಮ್ಮುಖವಾಗಿ ಕ್ರಮಿಸಿದರು.

ಹಿಂದಿನ ಸೀಟಿನಲ್ಲಿ ಮಂಡಿಯೂರಿ ಕುಳಿತು ಬೈಕ್ ಚಲಾಯಿಸುವ ಹಳೆ ದಾಖಲೆಯೂ ಪತನಗೊಂಡಿತು. 2015ರಲ್ಲಿ ಇದೇ ತಂಡದ ಸವಾರ 19 ಕಿ.ಮೀ ದೂರವನ್ನು 22 ಸೆಕೆಂಡ್‌ಗಳಲ್ಲಿ ಕ್ರಮಿಸಿದ್ದು ದಾಖಲೆಯಾಗಿತ್ತು. ಎಸ್. ವಿ.ರಿನು ಈ ರೀತಿ 305.4 ಕಿ.ಮೀ ದೂರವನ್ನು ಕ್ರಮಿಸಿದರು.

'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್, ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಹಾಗೂ ವರ್ಲ್ಡ್ ರೆಕಾರ್ಡ್ಸ್ ಸಂಸ್ಥೆಗಳ ಅಧಿಕಾರಿಗಳು ಸಾಹಸ ಪ್ರದರ್ಶನದ ಸ್ಥಳದಲ್ಲಿ ಹಾಜರಿದ್ದರು. ಈ ಸಾಹಸ ಪ್ರದರ್ಶನದ ವಿಡಿಯೋ ದಾಖಲೆಗಳನ್ನು ಅವರಿಗೆ ಒದಗಿಸಲಿದ್ದೇವೆ. ಒಂದು ತಿಂಗಳಲ್ಲಿ ಈ ದಾಖಲೆಗಳ ದೃಢೀಕರಣ ಪತ್ರ ಕೈಸೇರುವ ನಿರೀಕ್ಷೆ ಇದೆ' ಎಂದು ರಕ್ಷಣಾ ಇಲಾಖೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಗುರುಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

ವಿಶ್ವ ದಾಖಲೆ: ಹೊಸ ಪ್ರಯತ್ನಗಳು

- ಒಂದೇ ಬೈಕಿನಲ್ಲಿ 12 ಮಂದಿಯ ಮಾನವ ಪಿರಮಿಡ್ ಹೊತ್ತು 1 ಕಿ.ಮೀ ದೂರವನ್ನು 51.30 ಸೆಕೆಂಡ್‌ನಲ್ಲಿ ಕ್ರಮಿಸುವ ಹೊಸ ಪ್ರಯತ್ನವನ್ನು ಕ್ಯಾ. ಶಿವಂ ಸಿಂಗ್ ಮಾಡಿದರು.
- ಟಾರ್ನಡೋಸ್ ತಂಡ ಐದು ಬೈಕ್‌ಗಳಲ್ಲಿ 44 ಮಂದಿಯ ಪಿರಮಿಡ್ ಹೊತ್ತು 1 ಕಿ.ಮೀ ದೂರವನ್ನು 53.30 ಸೆಕೆಂಡ್‌ಗಳಲ್ಲಿ ಕ್ರಮಿಸಿತು. ಮಹಾಂತೇಶ್ ಕಲಾಮದಿ, ಬಿ.ಕೆ.ರಾಮಜಿ, ಅಭಿನ್ ಭುಜೆಲ್, ಮನೀಶ್ ಹಾಗೂ ಶೈಲೇಶ್ ಬೈಕ್ ಚಲಾಯಿಸಿದ್ದರು.
- 39 ಮಂದಿಯ ಪಿರಮಿಡ್‌ನೊಂದಿಗೆ ಏಳು ಬೈಕ್‌ಗಳಲ್ಲಿ ಸಾಗುವ ಮೂಲಕ 1200 ಮೀ ದೂರವನ್ನು 1 ನಿಮಿಷ 11 ಸೆಕೆಂಡ್‌ಗಳಲ್ಲಿ ಕ್ರಮಿಸುವ ಮೂಲಕ ಟಾರ್ನಡೋಸ್ ಹೊಸ ದಾಖಲೆ ಸೃಷ್ಟಿಸಿದೆ. ಈ ಪಿರಮಿಡ್ 209 ಇಂಚುಗಳಷ್ಟು ಎತ್ತರವಿತ್ತು. ಕ್ಯಾ.ಶಿವಂ ಸಿಂಗ್, ನೀಲಾಂಜನ್ ಬೇಜ್, ಮಲ್ಲಿಕಾರ್ಜುನ, ಜೆ.ಎಸ್.ಯಾದವ್, ಪ್ರದೀಪ್ ಎಸ್.ಎಸ್, ಫರ್ಗೆ ವಿಜಯ್, ಪಿ. ಮುರುಗೇಶನ್ ಬೈಕ್ ಚಲಾಯಿಸಿದ್ದರು.
- ಕಾಲಿನಲ್ಲೇ ಬೈಕ್‌ನ ಹ್ಯಾಂಡಲ್ ನಿಯಂತ್ರಿಸಿ 305.4 ಕಿ.ಮೀ ಕ್ರಮಿಸುವ ಹೊಸ ಪ್ರಯತ್ನವನ್ನು ಶೆವಾಲೆ ರವೀಂದ್ರ ಮಾಡಿದರು.

ನಿಧನ ವಾರ್ತೆ

ಎಸ್.ಎನ್. ಚೇತನಾ

ಬೆಂಗಳೂರು: ನಗರದ ವಿ.ವಿ. ಪುರ ನಿವಾಸಿ ಎಸ್.ಎನ್. ಚೇತನಾ (63) ನಿಧನರಾದರು.

ಅವರು ದೂರದರ್ಶನದ ಹಿರಿಯ ಕ್ರೀಡಾ ನಿರ್ಮಾಪಕರಾಗಿ ನಿವೃತ್ತರಾದ ಕೆ. ಈಶ್ವರ್‌ರಾವ್ ಪತ್ನಿ. ಅವರಿಗೆ ಪುತ್ರ ಇದ್ದಾರೆ. 'ವಿಲ್ಸನ್ ಗಾರ್ಡನ್ ಸ್ಮಶಾನದಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು' ಎಂದು ಕುಟುಂಬದವರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ವೆಲೋಜ್ ಈವ್ ಸಂಸ್ಥೆಯು ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರತಿಭಾವಂತ ಮಕ್ಕಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಂತರರಾಷ್ಟ್ರೀಯ ದೇಹದಾರ್ಢ್ಯ ಪಟು ಎ.ವಿ.ರವಿ, ಮಮತಾ ಶಾಂತಕುಮಾರ್, ಬಿಜೆಪಿ ಮುಖಂಡ ಜೆ.ನಾರಾಯಣಪ್ಪ, ನಟಿಯರಾದ ವಾಣಿಶ್ರೀ, ಅದ್ವಿತಿ ಶೆಟ್ಟಿ, ಚಂದನಗೌಡ ಹಾಗೂ ರೋಶ್ನಿ ತೆಲ್ಕರ್, ನಿರ್ದೇಶಕ ರಮಾನಂದ್, ಮಯೂರಿ ಉಪಾಧ್ಯಾಯ, ಪಿ.ಏಕಾನಂದ ಭಾಗವಹಿಸಿದ್ದರು.

ಗೂಂಡಾ ಕಾಯ್ದೆಯಡಿ ಬಂಧನ

ದೊಡ್ಡಬಳ್ಳಾಪುರ: ಕೊಲೆ ಬೆದರಿಕೆ, ಕೊಲೆ ಯತ್ನ, ಹಲ್ಲೆ, ಸರ್ಕಾರಿ ಅಧಿಕಾರಿಗಳ ಕೆಲಸಕ್ಕೆ ಅಡ್ಡಿ ಸೇರಿದಂತೆ 8 ಪ್ರಕರಣಗಳಲ್ಲಿ ಭಾಗಿಯಾಗಿದ್ದ ಕಾಡನೂರು ಪಾಳ್ಯದ ನಿವಾಸಿ ಶಿವಶಂಕರ್ ಎಂಬುನನ್ನು ದೊಡ್ಡ-ಬೆಳವಂಗಲ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿದ್ದಾರೆ ಎಂದು ಬೆಂಗಳೂರು ಗ್ರಾಮಾಂತರ ಎಸ್‌ಪಿ ರವಿ ಡಿ.ಚನ್ನಣ್ಣನವರ್ ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.

ಸಂ.: ಬೆಂಅಪ್ರಾ/ನಯೋಸ/CLU-06/895/2020-21 ದಿನಾಂಕ : 07.11.2020

ಪ್ರಕಟಣೆ

M/s Kandukuri Bharat Kumar, Flat No. 502, Sy. No. 70, Sumadhura Sandoval, Thubarahalli Village, Kundalahalli Gate, Bengaluru-560 066 GPA Holder for N Srinivasa Reddy ಇವರು ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಹೂಡಿ ಗ್ರಾಮದ ಸರ್ವೆ ನಂ. 10/1B ರಲ್ಲಿನ 760.40 Sqm ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕಾ ವಲಯದಿಂದ ವಸತಿ ವಲಯಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(A)ರಡಿಯಲ್ಲಿ ಭೂಉಪಯೋಗ ಬದಲಾವಣೆ ಕೋರಿರುತ್ತಾರೆ. ಸದರಿ ಪ್ರದೇಶವನ್ನು ಕೈಗಾರಿಕಾ ವಲಯದಿಂದ ವಸತಿ ವಲಯಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಮಧ್ಯಮ ಮತ್ತು ಬಡ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ವಸತಿ ನಿವೇಶನಗಳು ಲಭ್ಯವಾಗುತ್ತವೆ ಹಾಗೂ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(A)ರನ್ವಯ, ಸದರಿ ಭೂಉಪಯೋಗ ಬದಲಾವಣೆ ಕುರಿತಂತೆ ಯಾರಿಂದಲಾದರೂ ಸಲಹೆ/ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆಯ **ದಿನಾಂಕದಿಂದ 15 ದಿನಗಳೊಳಗಾಗಿ** ಸಲಹೆ/ಆಕ್ಷೇಪಣೆಗಳನ್ನು ಲಿಖಿತ ಮೂಲಕ **ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜಕ ಸದಸ್ಯರವರಿಗೆ** ಸಲ್ಲಿಸಬೇಕೆಂದು ತಿಳಿಸಲಾಗಿದೆ. 15 ದಿನಗಳ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

BDA/PRO/CLU/18/2020-21

ಕೈಮಗ್ಗ ಮತ್ತು ಜವಳಿ ಇಲಾಖೆ
ಜಿಲ್ಲಾ ಪಂಚಾಯತ್, ರಾಮನಗರ
ಸಹಾಯಕ ನಿರ್ದೇಶಕರ ಕಚೇರಿ, ಜಿಲ್ಲಾ ಪಂಚಾಯತ್ ಭವನ, ರಾಮನಗರ-562159
ಕಛೇರಿ ದೂರವಾಣಿ / ಫ್ಯಾಕ್ಸ್: 080-27272288, ಇ-ಮೇಲ್: adhlstesrmg@gmail.com

ಸಂಖ್ಯೆ: ರಾಜಿಪ/ಕೈಜಇ/ಜಪ್ರಅ/ಹೊ.ಗು.ಆ.ಬಾ.ವಾಹನ/2020-21 ದಿನಾಂಕ: 04.11.2020

ಟೆಂಡರ್ ಪ್ರಕಟಣೆ

ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ರಾಮನಗರ ಕಛೇರಿಯ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ಟ್ಯಾಕ್ಸಿ ಸೇವೆಯನ್ನು ಒಂದು ವರ್ಷ ಅಥವಾ ಮುಂದಿನ ಆದೇಶದವರೆಗೆ ಪಡೆಯಲು ಉದ್ದೇಶಿಸಲಾಗಿದೆ. ಮಾಸಿಕ ಗರಿಷ್ಠ ಮೊತ್ತ ರೂ. 25,000/- ಗಳಿಗೆ (ಎಲ್ಲಾ ತೆರಿಗೆಗಳು ಸೇರಿ) ಒಳಪಟ್ಟು ಟ್ಯಾಕ್ಸಿ ಸೇವೆ ಒದಗಿಸಲು ಆಸಕ್ತರಿಂದ ಟ್ರಾವೆಲ್ಸ್ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಟ್ಯಾಕ್ಸಿ ಸೇವೆಯನ್ನು ಒದಗಿಸಲು ಇಚ್ಛಿಸುವ ಟ್ರಾವೆಲ್ಸ್ ಸಂಸ್ಥೆಯವರು ಸಹಾಯಕ ನಿರ್ದೇಶಕರ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್ ಭವನ, ಮೊದಲನೆ ಮಹಡಿ, ಬಿ.ಎಂ. ಮುಖ್ಯರಸ್ತೆ, ರಾಮನಗರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಿ, ಟೆಂಡರ್ ಫಾರಂನ್ನು **ದಿನಾಂಕ: 25.11.2020**ರ ಒಳಗೆ ಪಡೆದು, ದ್ವಿ-ಲಕೋಟೆಯಲ್ಲಿ ಭರ್ತಿ ಮಾಡಿದ ಟೆಂಡರ್ ಡಾಕ್ಯುಮೆಂಟ್‌ಗಳನ್ನು ದಿನಾಂಕ: **26.11.2020**ರ ಸಂಜೆ 4:00 ಗಂಟೆ ಒಳಗಾಗಿ ಈ ಕಛೇರಿಗೆ ಸಲ್ಲಿಸುವುದು.

ಸಹಿ/- ಸಹಾಯಕ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್
ರಾಮನಗರ

ವಾಸಾಸಂಇ/ರಾನ/ಬ್ರಾಂಚ್/229/2020-21

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ಡಾ: ಬಿ.ಆರ್.ಅಂಬೇಡ್ಕರ್ ವೀಧಿ,ಬೆಂಗಳೂರು-01
ದೂರವಾಣಿ ಸಂಖ್ಯೆ: 080-22864681, ಫ್ಯಾಕ್ಸ್: 080-22864619, ಇಮೆಲ್ :dfkarnataka@rediffmail.com

ಸಂಖ್ಯೆ:ಮೀನಿ/38/ವಾಹನ/2020 ದಿನಾಂಕ: 09-11-2020

ಪ್ರಕಟಣೆ

ಮೀನುಗಾರಿಕೆ ನಿರ್ದೇಶನಾಲಯದ ಉಪಯೋಗಕ್ಕಾಗಿ **2020-21ನೇ ಸಾಲಿನ** ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು **ಮಾಸಿಕ ಬಾಡಿಗೆ ಆಧಾರದ ಮೇಲೆ ಹೊರಗುತ್ತಿಗೆ ಮೂಲಕ ಅವಶ್ಯಕತೆ ಇದ್ದು, ವಾಹನವನ್ನು ಬಾಡಿಗೆಗೆ ಒದಗಿಸುವವರಿಂದ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.** ಟೆಂಡರ್ ಫಾರಂ ಶುಲ್ಕ **ರೂ. 100/-** ಪಾವತಿಸಿ ಟೆಂಡರ್ ಫಾರಂನಲ್ಲಿ ತಿಳಿಸಿರುವ ಮಾಹಿತಿಗಳನ್ನು ಮತ್ತು ಸಂಬಂದಿಸಿದ ದಾಖಲಾತಿಗಳನ್ನು ಈ ಕಛೇರಿಯಿಂದ ಪಡೆದು ಷರತ್ತು ನಿಬಂಧನೆಗಳನ್ನು ಒಪ್ಪಿ ಟೆಂಡರ್ ಫಾರಂ ಅನ್ನು ಟೆಂಡರ್‌ದಾರರು ದ್ವಿಲಕೋಟಿ ಪದ್ದತಿಯಲ್ಲಿ ಈ ಮೇಲಿನ ವಿಳಾಸದಲ್ಲಿ ಇಡಲಾದ ಈ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಕೊನೆಯ **ದಿನಾಂಕ: 25.11.2020ರ ಮಧ್ಯಾಹ್ನ: 5.00 ಗಂಟೆಯೊಳಗೆ** ಹಾಕುವುದು. ಇಎಂಡಿ ಮೊತ್ತ **ರೂ.20,000/-ಗಳ** ಡಿ.ಡಿ ಯನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಹೆಸರಿಗೆ ತೆಗೆಯಬೇಕು.ಟೆಂಡರ್ ತೆರೆಯುವ **ದಿನಾಂಕ: 26.11.2020ರ ಸಂಜೆ:5:00 ಗಂಟೆಗೆ** ಟೆಂಡರ್ ಸಲ್ಲಿಸಿರುವ ಆಸಕ್ತ ಟೆಂಡರ್‌ದಾರರು ಹಾಜರಿರುವುದು.

ಸಹಿ/-
ಮೀನುಗಾರಿಕೆ ನಿರ್ದೇಶಕರು

DIPR/DDU/SHIRDI SAI/1611/2020-21

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

IN THE COURT OF THE ASSISTANT COMMISSIONER DODDABALLAPURA SUB-DIVISION, AT DODDABALLAPUR
K.SC/ST No.13/2016-17

BETWEEN : **Smt. Sidlamma,** Since dead by her LRs & Others... **Petitioners**
AND : **Smt. Ramakka,** Since dead by her LRs & Another... **Respondents**

SUMMONS NOTICE TO DEFENDANT

1 (a) Smt. Gangamma, W/o Narasimha murthy, aged about 45 years, Residing at Bhakthanapalya village, Nelamangala Taluk, Bengaluru Rural District.
(b) Smt. Rathnamma, W/o Hanumantha rayappa, aged about 43 years, Residing at Arishinakunte colony, Basaveshwaranagar, Kasaba Hobli, Nelamangala Taluk, Bengaluru Rural District.
(c) Smt. Venkatalakshmamma, W/o Venkatachalamurthy, aged about 41 years, Resident of Jyothi Nagar, Nelamangala Taluk, Bengaluru Rural District.
(d) Smt. Tulasi, W/o Venkatesha Babu, aged about 39 years, Residing at No.56/A, Near Tejas Show Room, 4th Cross, 9th Main, Sadashivanagar, Bengaluru - 560 080.
(e) Smt. Asha, W/o Late. Srinivas, aged about 30 years, Residing at Bhakthanapalya village, Nelamangala Taluk, Bengaluru Rural District.
2. Sri. Shivakumar, S/o Late. Chikkanna, aged about 53 years, Residing at No.1108, Adarshnagar, Arishinakunte, Kasaba Hobli, Nelamangala Taluk, Bengaluru Rural District.

Whereas the petitioners filed a petition against the Respondents for the relief of restoration and nullifying the will against you, You are hereby summonsed to appear before this Hon'ble Authority, either in person or through pleader on the **27-11-2020** at 3-00 P.M to answer the same failing which the petition will be heard and determined as Ex-parte.

This draft given under my hand and seal of the court on this the 3-11-2020.

By order of the Authority of Assistant Commissioner, Doddaballapura Sub-Division at Doddaballapura.

RBI & ASSOCIATES
RATHNA BAI, Advocate
65, New No. 10, 2nd Cross, 4th Main, 3rd Floor, Gandhinagar, Bengaluru-560 009.

ಕೇಂದ್ರೀಯ ರೇಷ್ಮೆ ತಾಂತ್ರಿಕ ಸಂಶೋಧನಾ ಸಂಸ್ಥೆ
ಕೇಂದ್ರ ರೇಷ್ಮೆ ಮಂಡಳಿ (ಜವಳಿ ಸಚಿವಾಲಯ - ಭಾರತ ಸರ್ಕಾರ)
ಬಿ.ಟಿ.ಎಂ. ಬಡಾವಣೆ, ಮಡಿವಾಳ, ಬೆಂಗಳೂರು - 560068
Ph.: 080-26282136/26282101, Fax: 080-26680435, e-mail: cstriban.csb@nic.in

No. CSB-CSTRI/RECRUIT-JRF/2019-PS **ನೇರ ಸಂದರ್ಶನ** ದಿನಾಂಕ : 11.11.2020

ಜೂನಿಯರ್ ರಿಸರ್ಚ್ ಫೆಲೋ ಹುದ್ದೆಗೆ ನೇಮಕಾತಿಗಾಗಿ

ಜೂನಿಯರ್ ರಿಸರ್ಚ್